**<u>ಸಾಕ್ಷಿಯನ್ನು ಈ ದಿನ ದಿಃ 30.05.2024 ರಂದು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.</u>**

<u>ಪಾಟೀ ಸವಾಲುಃ ಆರೋಪಿ ಪರ ವಕೀಲರಿಂದಃ</u>

1. ನಾನು ಪೋಲೀಸರ ಮುಂದೆ ಹೇಳಿಕೆ ಕೊಟ್ಟಿರುತ್ತೇನೆ. ದಿಃ 29.07.2021 ರಂದು ಹೇಳಿಕೆ ನೀಡಿದ್ದೆ. ಆ ದಿನ ಶುಕ್ರವಾರ ಆಗಿದ್ದಿರಬಹುದು. ನನ್ನ ಅಜ್ಜಿ ಮೃತ ಪಟ್ಟ ದಿನವೇ ಹೇಳಿಕೆ ನೀಡಿರುತ್ತೇನೆ. ನಾನು ಪೋಲೀಸರ ಮುಂದೆ ನೀಡಿದ ಹೇಳಿಕೆಯಲ್ಲಿ 'ನನ್ನ ಅಣ್ಣ ಯಶವಂತ ನನ್ನ ದೊಡ್ಡಪ್ಪನ ಬೈಕನ್ನು ಅವರ ಮನೆಯ ಎದುರು ತೊಳೆಯುತ್ತಿದ್ದ , ಆಗ ನನ್ನ ಅಪ್ಪ ನನ್ನ ಸ್ಕೂಟರ್ ನ್ನು ತೊಳೆಯದೇ , ನಿನ್ನ ಅಪ್ಪನ ಸ್ಕೂಟರ್ ನ್ನು ತೊಳೆಯುತ್ತಿದ್ದೀಯಾ ಎಂದು ಕೈಯಲ್ಲಿ ಹೊಡೆದ ' ಎಂದು ಹೇಳಿರುತ್ತೇನೆ. ಪೋಲೀಸರ ಮುಂದೆ ನಾನು 'ಆಗ ನನ್ನ ಅಜ್ಜಿ, ಅವ್ವ ಇಲ್ಲದಿರುವ ಮಕ್ಕಳಿಗೆ ಏಕೆ ಹೊಡೆಯುತ್ತಿದ್ದೀಯಾ ಎಂದು ಬಂದರು, ಅಜ್ಜಿ ನನ್ನ ಅಪ್ಪನಿಗೆ ಹೊಡೆಯುತ್ತೇನೆ ಎಂದು ದೊಣ್ಣೆ ಹಿಡಿದುಕೊಂಡು ಬಂದರು ' ಎಂದು ಹೇಳಿರುತ್ತೇನೆ. ಈ ಮೇಲ್ಕಂಡ ರೀತಿಯಲ್ಲಿ ನಾನು ಪೋಲೀಸರ ಮುಂದೆ ಹೇಳಿಕೆ ನೀಡಿರುವುದಿಲ್ಲ ಎನ್ನುವುದು ಸರಿಯಲ್ಲ.

2. ನಾನು ಪೋಲೀಸರ ಮುಂದೆ , 'ಆಗ ನನ್ನ ಅಪ್ಪ ಆ ದೊಣ್ಣೆಯನ್ನು ಆಕೆಯ ಕೈನಿಂದ ಕಿತ್ತುಕೊಂಡು ನನ್ನ ಅಜ್ಜಿಯ ಕಪಾಳಕ್ಕೆ ಅದರಲ್ಲಿ ಹೊಡೆದರು', ಎಂದು ಹೇಳಿರುತ್ತೇನೆ. ಈ ಮೇಲ್ಕಂಡ ರೀತಿಯಲ್ಲಿ ನಾನು ಪೋಲೀಸರ ಮುಂದೆ ಹೇಳಿಕೆ ನೀಡಿರುವುದಿಲ್ಲ ಎನ್ನುವುದು ಸರಿಯಲ್ಲ.

3. ನನ್ನ ಅಪ್ಪ ಮತ್ತು ಅಮ್ಮನ ನಡುವೆ ಹೊಂದಾಣಿಕೆ ಇರಲಿಲ್ಲ ಎನ್ನುವುದು ಸರಿಯಲ್ಲ. ನನ್ನ ಅಮ್ಮನ ಊರು ಕೆಂಪಯ್ಯನಹುಂಡಿ ಎನ್ನುವುದು ಸರಿ . ಕೆಂಪಯ್ಯನಹುಂಡಿಯಿಂದ ಬನ್ನಹಳ್ಳಿಗೆ 25 ಕಿ.ಮಿ. ದೂರವಾಗುತ್ತದೆ ಎನ್ನುವುದು ನನಗೆ ಗೊತ್ತಿಲ್ಲ, ಅಲ್ಲಿಗೆ ಬಸ್ಸಿನಲ್ಲೇ ಹೋಗಬೇಕು ಎನ್ನುವುದು ಸರಿ . ಬಸ್ಸಿನಲ್ಲಿ ಒಂದೂವರೆ ಗಂಟೆ ಪ್ರಯಾಣ ಎನ್ನುವುದು ಸರಿ. ನನ್ನ ತಾಯಿ ನರಸೀಪುರಕ್ಕೆ ಗಾರ್ಮೆಂಟ್ಸ್ ಕೆಲಸಕ್ಕೆ ಹೋಗುತ್ತಾರೆ ಎನ್ನುವುದು ಸರಿ. ಆಕೆ ಕೆಂಪಯ್ಯನಹುಂಡಿಯಿಂದಲೇ ನರಸೀಪುರಕ್ಕೆ ಹೋಗಿ ಬರುತ್ತಾರೆ. ಆಕೆ ಬೆಳಿಗ್ಗೆ 08.30 ಕ್ಕೆ ಹೋಗಿ ಸಂಜೆ 06.00 ಗಂಟೆಗೆ ವಾಪಾಸ್ಸು ಬರುತ್ತಾರೆ. ಈಗ ನಾನು 10 ನೇ ತರಗತಿಗೆ ಸೇರಬೇಕು. ಕೆಂಪಯ್ಯನಹುಂಡಿಯ ಶಾಲೆಯಲ್ಲೇ ಓದುತ್ತಿದ್ದೇನೆ. ಬೆಳಿಗ್ಗೆ 10.00 ಗಂಟೆಗೆ ಶಾಲೆಗೆ ಹೋದರೆ , ಸಂಜೆ 04.00 ಗಂಟೆಗೆ ವಾಪಾಸ್ಸು ಮನೆಗೆ ಬರುತ್ತೇನೆ.

4. ನಾನು ಮುಖ್ಯ ವಿಚಾರಣೆಯಲ್ಲಿ ಹೇಳಿದ ಘಟನೆ ನಡೆಯಿತು ಎನ್ನಲಾದ ಸಂಧರ್ಬದಲ್ಲಿ ನಾನು ಅಲ್ಲಿ ಇರಲಿಲ್ಲ ಎನ್ನುವುದು ಸರಿಯಲ್ಲ. ನನ್ನ ಜೊತೆ ಈ ದಿನ ನ್ಯಾಯಾಲಯಕ್ಕೆ ನನ್ನ ತಾಯಿಯೂ ಸಹ ಬಂದಿದ್ದಾರೆ ಎನ್ನುವುದು ಸರಿ . ಹೋದ ಬಾರಿ ನ್ಯಾಯಾಲಯಕ್ಕೆ ಬರುವಾಗ ನನ್ನ ತಾಯಿಯೂ ಜೊತೆಯಲ್ಲಿ ಬಂದಿದ್ದರು ಎನ್ನುವುದು ಸರಿ. ನೀನು ತಾಯಿ ಹೇಳಿದ ಮಾತನ್ನೇ ಕೇಳುತ್ತೀಯಾ ಅಲ್ಲವೇ ಎಂದು ಕೇಳಿದ ಪ್ರಶ್ನೆಗೆ ಸಾಕ್ಷಿ, ಇಬ್ಬರ ಮಾತನ್ನು ಕೇಳುತ್ತೇನೆ ಎನ್ನುತ್ತಾರೆ. ನನ್ನ ತಂದೆ ಹೊಡೆಯುವುದು ಬಡಿಯುವುದು ಮಾಡಿರುವುದಿಲ್ಲ. ನಾನು ತಪ್ಪು ಮಾಡಿದಲ್ಲಿ , ಓದದೇ ಇದ್ದಾಗ ನನ್ನ ತಂದೆ ಬೈಯುತ್ತಿದ್ದರು ಎನ್ನುವುದು ಸರಿ. ಆದರೆ ಹೊಡೆಯುತ್ತಿರಲಿಲ್ಲ. ಆದ್ದರಿಂದ ನನ್ನ ತಂದೆಯ ಮೇಲೆ ನನಗೆ ಯಾವಾಗಲು ಕೋಪ ಎನ್ನುವುದು ಸರಿಯಲ್ಲ. ನಾನು ನನ್ನ

ಮುಖ್ಯ ವಿಚಾರಣೆಯಲ್ಲಿ , ನನ್ನ ತಾಯಿ ಹೇಳಿಕೊಟ್ಟಹಾಗೆ ನ್ಯಾಯಾಲಯದ ಮುಂದೆ ಹೇಳಿರುತ್ತೇನೆ ಎನ್ನುವುದು ಸರಿಯಲ್ಲ. ಹೋದ ಬಾರಿ ನ್ಯಾಯಾಲಯಕ್ಕೆ ಬಂದಾಗಲೇ ಮೊದಲ ಬಾರಿಗೆ ನೀನು ದೊಣ್ಣೆ ಮತ್ತು ಗಾಜಿನ ಚೂರನ್ನು ನೋಡಿರುವುದು ಎಂದು ಮಾಡಿದ ಸಲಹೆಗೆ ಸಾಕ್ಷಿ , ಹೊಡೆದಾಗಲೂ ಅವುಗಳನ್ನು ನೋಡಿದ್ದೆ ಎನ್ನುತ್ತಾರೆ.

5. ನಮ್ಮ ಮನೆಯಿಂದ ನಮ್ಮ ಹೊಲ ಹತ್ತಿರದಲ್ಲೇ ಇದೆ.

6. ನಮ್ಮ ಅಜ್ಜಿ ದೊಡ್ಡಪ್ಪನವರ ಮನೆಯ ಮುಂದಿನ ರಸ್ತೆಯಲ್ಲಿ ಬಿದಿದ್ದರು. ಮನೆಯ ಮುಂದೆ 20 ಅಡಿ ಟಾರು ರಸ್ತೆ ಇದೆ ಎನ್ನುವುದು ಸರಿ. ಅಜ್ಜಿಗೆ ರಕ್ತ ಬಂದಿರಲಿಲ್ಲ. ನಾನು ಆ ದಿನ ಆ ಸಮಯದಲ್ಲಿ ಆ ಸ್ಥಳದಲ್ಲಿ ಇರಲೇ ಇಲ್ಲ ಎನ್ನುವುದು ಸರಿಯಲ್ಲ. ನನ್ನ ತಾಯಿ ಹೇಳಿಕೊಟ್ಟಿರುವ ಹಾಗೆ ಸುಳ್ಳು ಸಾಕ್ಷ್ಯವನ್ನು ನುಡಿಯುತ್ತಿದ್ದೇನೆ ಎನ್ನುವುದು ಸರಿಯಲ್ಲ. ನನ್ನ ತಂದೆ ತಾಯಿ ಯಾವಾಗಲು ಜಗಳವಾಡುತ್ತಿದ್ದು , ನನ್ನ ತಂದೆ , ತಾಯಿಗೆ ಹೊಡೆಯುತ್ತಿದ್ದರಿಂದ , ಈ ಬಗ್ಗೆ ನನಗೆ ಕೋಪವಿದ್ದು , ಆ ಕಾರಣಕ್ಕಾಗಿಯೂ ನಾನು ತಂದೆಯ ವಿರುದ್ಧ ಸಾಕ್ಷ್ಯ ನುಡಿಯುತ್ತಿದ್ದೇನೆ ಎನ್ನುವುದು ಸರಿಯಲ್ಲ.

7. ನನ್ನ ತಂದೆ ದಿನಾಲು ಕುಡಿಯುತ್ತಿದ್ದರು. ದಿನಾಲು ನನ್ನ ತಾಯಿಯೊಂದಿಗೆ ಜಗಳವಾಡುತ್ತಿದ್ದರು ಎನ್ನುವುದು ಸರಿಯಲ್ಲ.

8. ನಾನು ನರಸೀಪುರದ ನ್ಯಾಯಾಲಯಕ್ಕೆ ನನ್ನ ತಾಯಿಯೊಂದಿಗೆ ಹೋಗಿದ್ದೆ ಎನ್ನುವುದು ಸರಿ . ನ್ಯಾಯಾಧೀಶರ ಮುಂದೆ ಹೀಗೆ ಹೇಳಬೇಕು ಎಂದು ಪೋಲೀಸರು ಮತ್ತು ನನ್ನ ತಾಯಿ ಹೇಳಿಕೊಟ್ಟಿದ್ದರು ಎನ್ನುವುದು ಸರಿಯಲ್ಲ. ನನ್ನ ಅಜ್ಜಿ ಜಾರಿ ಬಿದ್ದು ಮೃತ ಪಟ್ಟರು ಎಂದು ಅಲ್ಲಿದ್ದ ಜನರು ಮಾತನಾಡಿಕೊಳ್ಳುತ್ತಿದ್ದರೂ ಸಹ ನಾನು ಸುಳ್ಳು ಸಾಕ್ಷ್ಯವನ್ನು ನುಡಿಯುತ್ತಿದ್ದೇನೆ ಎನ್ನುವುದು ಸರಿಯಲ್ಲ.

**<u>ಮರು ವಿಚಾರಣೆ ಃ ಇಲ್ಲ</u>**

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಸಾಕ್ಷಿಯ ಹೇಳಿಕೆಯನ್ನು ಬೆರಳಚ್ಚು ಮಾಡಿಸಲಾಯಿತು)**

**ಓ ಹೇ ಕೇ ಸ ಇ ಎ ಒ**

**3ನೇ ಹೆಚ್ಚುವರಿ ಜಿಲ್ಲಾ ಮತ್ತು ಸೆಷನ್ಸ್ ನ್ಯಾಯಾಧೀಶರು**
**ಮೈಸೂರು.**